Raichur	166
Bellary	584
Dharwad	1377
N. Kanara	288
Chitradurga	420
Shimoga	320
S. Kanara	1009
Hassan	343
Chickmagalur	175
Mandya	483
Mysore	1544
Kodagu	131
Total	**16,492**

ನಿವೃತ್ತಿ ವೇತನವನ್ನು ತಡವಾಗಿ ನೀಡಿದ್ದಕ್ಕೆ ಬಡ್ಡಿ ಕೊಡುವುದು

2038- ಶ್ರೀ ಯು.ಆರ್. ಸಭಾಪತಿ (ಉಡುಪಿ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಲೋಕೋಪಯೋಗಿ ಇಲಾಖೆಯಲ್ಲಿ ನಿವೃತ್ತಿ ವೇತನ ಮತ್ತಿತರ ನಿವೃತ್ತಿ ಸೌಲಭ್ಯಗಳನ್ನು ತುಂಬಾ ತಡವಾಗಿ ಪಾವತಿ ಮಾಡಿರುವ ಪ್ರಕರಣಗಳಲ್ಲಿ ಸಂಬಂಧಿಸಿದ ನಿವೃತ್ತಿಯಾದ ನೌಕರರು, ಅಧಿಕಾರಿಗಳು, ಸರ್ಕಾರಿ ಆದೇಶದಂತೆ ವಿಳಂಬವಾಗಿ ನೀಡಿದ ಪಾವತಿಗೆ ಬಡ್ಡಿಯನ್ನು ಕೋರಿರುವ ಎಷ್ಟು ಪ್ರಸ್ತಾವನೆಗಳು ಇಲಾಖೆಯ ಮುಂದಿದೆ (ಹೆಸರು ಸಮೇತ ವಿವರ ನೀಡುವುದು)*

ಆ) *ಇಂತಹ ಸಹಾನುಭೂತಿಯ ನ್ಯಾಯಯುತ ಪ್ರಕರಣಗಳನ್ನು ವಿನಾಕಾರಣ ವಿಳಂಬಿಸದೆ ಕೂಡಲೇ ನಿರ್ದಿಷ್ಟ ಕ್ರಮಗಳನ್ನು ಕೈಗೊಳ್ಳಬೇಕಾಗಿರುವುದು ಸಮಂಜಸವಲ್ಲವೆ.*

ಶ್ರೀ ಸಿ.ಎಂ. ಉದಾಸಿ (ಲೋಕೋಪಯೋಗಿ ಸಚಿವರು) :

ಅ) 12 (ವಿವರಗಳನ್ನು ಅನುಬಂಧ -1 ರಲ್ಲಿ ಲಗತ್ತಿಸಿದೆ).

ಆ) ಹೌದು.

ಅನುಬಂಧ

1) ಶ್ರೀ ಬಿ.ಬಿ. ಭಜಂತ್ರಿ, ಅಧೀಕ್ಷಕ ಅಭಿಯಂತರರು, ಇವರು ದಿನಾಂಕ : 30.11.93ರಂದು ವಯೋ ನಿವೃತ್ತಿ ಹೊಂದಿದ್ದು, ಸದರಿ ಅಧಿಕಾರಿಗಳ ವಿರುದ್ಧ ಇಲಾಖಾ ವಿಚಾರಣೆ ಬಾಕಿ ಇದ್ದ ಪ್ರಯುಕ್ತ ತಾತ್ಕಾಲಿಕ ವಿಶ್ರಾಂತಿ ವೇತನ ಮಂಜೂರು ಮಾಡಿ ಉಪದಾನವನ್ನು ತಡೆಹಿಡಿಯಲಾಗಿತ್ತು. ಸದರಿ ಅಧಿಕಾರಿಗಳು ವಿರುದ್ಧ ಇಲಾಖಾ ವಿಚಾರಣೆಯು ದಿನಾಂಕ : 26.3.96ರಂದು ಮುಕ್ತಾಯಗೊಂಡಿದ್ದು, ಸದರಿ ಅಧಿಕಾರಿಗಳು ವಿಳಂಬವಾಗಿ ಪಾವತಿ ಮಾಡಿರುವ ಉಪದಾನದ ಮೇಲೆ ಬಡ್ಡಿ ಮಂಜೂರು ಮಾಡುವಂತೆ ದಿನಾಂಕ: 14.5.97ರಂದು ಮನವಿ ಸಲ್ಲಿಸಿದ್ದು, ಸದರಿ ಪ್ರಸ್ತಾವನೆಯನ್ನು ಪರಿಶೀಲಿಸಿ ಆರ್ಥಿಕ ಇಲಾಖೆಯ ಸಹಮತಿಯನ್ನು ಕೋರಲಾಗಿದೆ.

2) ಶ್ರೀ ಎನ್. ಯಲ್ಲಪ್ಪ, ಕಾರ್ಯಪಾಲಕ ಇಂಜಿನಿಯರ್ ಇವರು ದಿನಾಂಕ : 30.9.87 ರಂದು ನಿವೃತ್ತಿ ಹೊಂದಿದ್ದು, ಇವರ ವಿರುದ್ಧ ಇದ್ದ ಇಲಾಖಾ ವಿಚಾರಣೆ ಮುಕ್ತಾಯಗೊಂಡ ನಂತರ ಸದರಿ ಅಧಿಕಾರಿಗಳ ತಡೆಹಿಡಿದಿರುವ ಉಪದಾನ ಬಿಡುಗಡೆ ಮಾಡುವಂತೆ ಮಹಾಲೇಖಪಾಲರಿಗೆ ದಿನಾಂಕ : 19.6.97ರಂದು ಪತ್ರ ಬರೆಯಲಾಗಿದೆ. ಸದರಿ ಅಧಿಕಾರಿಗಳು ದಿನಾಂಕ : 4.2.97ರಂದು ಮನವಿ ಸಲ್ಲಿಸಿ ವಿಳಂಬವಾಗಿ ಪಾವತಿ ಮಾಡಿರುವ ನಿವೃತ್ತಿ ಸೌಲಭ್ಯಗಳಿಗೆ ಬಡ್ಡಿ ಮಂಜೂರು ಮಾಡುವಂತೆ ಕೋರಿರುವುದರಿಂದ ಪ್ರಸ್ತಾವನೆಯನ್ನು ಪರಿಶೀಲಿಸಿ ಆರ್ಥಿಕ ಇಲಾಖೆಯ ಸಹಮತಿಯನ್ನು ಕೋರಿದೆ.

3) ಶ್ರೀ ಬಿ. ತಿಪ್ಪೇಸ್ವಾಮಿ, ಅಧೀಕ್ಷಕ ಇಂಜಿನಿಯರ್, ಇವರು ದಿನಾಂಕ : 30.6.91ರಂದು ವಯೋ ನಿವೃತ್ತಿ ಹೊಂದಿದ್ದು, ಸದರಿ ಅಧಿಕಾರಿಗಳ ವಿರುದ್ಧ ಇಲಾಖಾ ವಿಚಾರಣೆ ಬಾಕಿ ಇದ್ದ ಪ್ರಯುಕ್ತ, ನಿವೃತ್ತಿ ಉಪದಾನವನ್ನು ತಡೆಹಿಡಿಯಲಾಗಿತ್ತು. ದಿನಾಂಕ 13.11.96ರ ಆದೇಶದಲ್ಲಿ ಇಲಾಖಾ ವಿಚಾರಣೆ ಮುಕ್ತಾಯಗೊಂಡ ಪ್ರಯುಕ್ತ ಸದರಿ ಅಧಿಕಾರಿಗಳಿಗೆ ತಡೆಹಿಡಿದಿರುವ ಉಪದಾನವನ್ನು ಬಿಡುಗಡೆ ಮಾಡುವಂತೆ ಮಹಾಲೇಖಪಾಲರನ್ನು 13.11.96ರಂದು ಕೋರಲಾಗಿದ. ಸದರಿ ಅಧಿಕಾರಿಗಳು ವಿಳಂಬವಾಗಿ ಪಾವತಿ ಮಾಡಿರುವ ನಿವೃತ್ತಿ ಸೌಲಭ್ಯಗಳ ಬಡ್ಡಿಯನ್ನು ಮಂಜೂರು ಮಾಡುವಂತೆ ದಿನಾಂಕ 11.4.97ರಂದು ಮನವಿಯನ್ನು ಸಲ್ಲಿಸಿದ್ದು, ಸದರಿ ಪ್ರಸ್ತಾವನೆಯನ್ನು ಪರಿಶೀಲಿಸಲಾಗುತ್ತಿದೆ.

4) ಶ್ರೀ ಬಿ. ಮೈಲಪ್ಪ, ಕಾರ್ಯಪಾಲಕ ಇಂಜಿನಿಯರ್ ಇವರು ದಿನಾಂಕ 31.8.83ರಂದು ವಯೋ ನಿವೃತ್ತಿ ಹೊಂದಿದ್ದು, ಸದರಿ ಅಧಿಕಾರಿಗಳ ವಿರುದ್ಧ ಇಲಾಖಾ ವಿಚಾರಣೆ ಬಾಕಿಯಿದ್ದ ಇದ್ದ ಪ್ರಯುಕ್ತ, ನಿವೃತ್ತಿ ಉಪದಾನವನ್ನು ತಡೆಹಿಡಿಯಲಾಗಿತ್ತು. ಪ್ರಸ್ತುತ ಸದರಿ ಅಧಿಕಾರಿಗಳ ಇಲಾಖಾ ವಿಚಾರಣೆ ಮುಕ್ತಾಯಗೊಂಡಿದ್ದು, ದಿನಾಂಕ : 31.5.97 ರಂದು ಸರ್ಕಾರಕ್ಕೆ ಮನವಿ ಸಲ್ಲಿಸಿ ವಿಳಂಬವಾಗಿ ಪಾವತಿ ಮಾಡಿರುವ ಉಪದಾನದ ಮೇಲೆ ಬಡ್ಡಿ ಮಂಜೂರು ಮಾಡುವಂತೆ ಕೋರಿದ್ದು, ಈ ಪ್ರಸ್ತಾವನೆ ಪರಿಶೀಲನೆಯಲ್ಲಿದೆ.

5) ಶ್ರೀ ಮಿರ್ಜಾಹುಸೇನ್ ಅಲಿ, ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಇವರು ದಿನಾಂಕ 30.4.92ರಂದು ಸೇವೆಯಿಂದ ನಿವೃತ್ತರಾಗಿದ್ದು, ನಿವೃತ್ತಿ ನಂತರ ಮಂಜೂರಾತಿ ವಿಳಂಬವಾಗಿರುವ ರಜೆ ವೇತನ ಮತ್ತು ಉಪದಾನ ಹಾಗೂ ಇತರೆ ಸೌಲಭ್ಯಗಳ ಮೇಲೆ ಬಡ್ಡಿ ಕೋರಿ ಕೆ.ಎ.ಟಿ.ಯಲ್ಲಿ ಅರ್ಜಿ ಸಂ : 1893 : 97ರಲ್ಲಿ ದಾವೆ ಹೂಡಿ ಬಡ್ಡಿಯನ್ನು ಮಂಜೂರು ಮಾಡುವಂತೆ ಕೋರಿರುತ್ತಾರೆ.

6) ಶ್ರೀ ಎನ್. ವಿ. ಚಂದ್ರಶೇಖರ್, ಸ.ಕಾ.ಇಂ. ರವರು ದಿನಾಂಕ 30.4.94ರಂದು ನಿವೃತ್ತರಾಗಿದ್ದು, ನಿವೃತ್ತಿ ನಂತರ ಅವರಿಗೆ ತಡವಾಗಿ ಪಾವತಿಸಿದ ಉಪದಾನದ ಮೇಲೆ ಬಡ್ಡಿ ಕೋರಿ ಅರ್ಜಿ ಸಂ.6894:96ರಲ್ಲಿ ಕರ್ನಾಟಕ ಆಡಳಿತ ನ್ಯಾಯ ಮಂಡಳಿಗೆ ಅರ್ಜಿ ಸಲ್ಲಿಸಿ ಬಡ್ಡಿಯನ್ನು ಕೋರಿರುತ್ತಾರೆ.

7) ಶ್ರೀ ಕೆ.ಎಸ್. ಶಾಮಣ್ಣ, ಸ.ಕಾಂ.ಇಂ. ರವರು ದಿನಾಂಕ 31.10.95ರಲ್ಲಿ ನಿವೃತ್ತರಾಗಿದ್ದು, ಸದರಿ ಅಧಿಕಾರಿಯವರಿಗೆ ತಡವಾಗಿ ಪಾವತಿಸಿದ ನಿವೃತ್ತಿ ಸೌಲಭ್ಯಗಳಿಗೆ ಬಡ್ಡಿಯನ್ನು ಮಂಜೂರು ಮಾಡುವಂತೆ ಕೋರಿರುವುದರಿಂದ ಅಗತ್ಯ ದಾಖಲೆಗಳೊಂದಿಗೆ ಪ್ರಸ್ತಾವನೆಯನ್ನು ಸಲ್ಲಿಸುವಂತೆ ಶ್ರೀ ಕೆ.ಎಸ್. ಶಾಮಣ್ಣ ಇವರಿಗೆ ಪತ್ರ ಬರೆಯಲಾಗಿದೆ.

8) ಶ್ರೀ ಆರ್.ಎನ್. ಅಡವಿ, ಕಿರಿಯ ಇಂಜಿನಿಯರ್. ಇವರು ದಿನಾಂಕ 11.8.85 ರಂದು ನಿಧನ ಹೊಂದಿದ್ದು, ಇವರ ಪತ್ನಿ ಶ್ರೀಮತಿ ಮೀನಾರವರು ಉಪದಾನದಲ್ಲಿ ತಡೆಹಿಡಿದ ಮೊತ್ತ ರೂ. 24,163.14ಗಳ ಮೇಲೆ ಬಡ್ಡಿ ಕೋರಿ ಅರ್ಜಿ ಸಂ : 3842 : 95ರಲ್ಲಿ ಕೆ.ಎ.ಟಿ.ಗೆ ಅರ್ಜಿ ಸಲ್ಲಿಸಿರುತ್ತಾರೆ.

9) ಶ್ರೀ ಬಿ. ಕೇಶವಭಟ್ಟ, ಪ್ರಥಮ ದರ್ಜೆ ಉಗ್ರಾಣ ಪಾಲಕರು, ಸ್ವಇಚ್ಛೆ ನಿವೃತ್ತಿ ಹೊಂದಿದ್ದು ಉಪದಾನದಲ್ಲಿ ತಡೆಹಿಡಿದ ರೂ. 33,000.00ಗಳ ಮೇಲೆ ಬಡ್ಡಿ ಕೋರಿ ಅರ್ಜಿ ಸಂ 4086:91ರಲ್ಲಿ ಕೋರ್ಟಿಗೆ ಅರ್ಜಿ ಸಲ್ಲಿಸಿರುತ್ತಾರೆ. ಈ ಬಗ್ಗೆ ಪಾವತಿಸಿದ ಬಡ್ಡಿಗೆ ಕಾರ್ಯಪಾಲಕ ಅಭಿಯಂತರರು, ಬೆಳಗಾಂ ಇವರನ್ನು ಕಾರಣಕರ್ತರೆಂದು ಗುರುತಿಸಿ ಅವರಿಂದ ಹಣ ವಸೂಲು ಮಾಡಲು ಕ್ರಮ ತೆಗೆದುಕೊಳ್ಳಲಾಗಿದೆ.

10) ಶ್ರೀ ಎಸ್. ಆರ್. ವಿನಾಯಕ, ಕಿರಿಯ ಇಂಜಿನಿಯರ್ ಇವರು ದಿನಾಂಕ : 30.9.90 ರಂದು ನಿವೃತ್ತಿ ಹೊಂದಿದ್ದು, ತಡೆಹಿಡಿಯಲಾದ ನಿವೃತ್ತಿ ಸೌಲಭ್ಯಗಳ ಮೇಲೆ ಬಡ್ಡಿ ಮಂಜೂರು ಮಾಡುವಂತೆ ಕೋರಿ ಅರ್ಜಿ ಸಂ: 4994 : 91ರಲ್ಲಿ ಕೆಎಟಿ ಯಲ್ಲಿ ಅರ್ಜಿ ಸಲ್ಲಿಸಿರುತ್ತಾರೆ.

11) ಶ್ರೀ ಸಣ್ಣ ತಿಮ್ಮಪ್ಪ, ಕಿರಿಯ ಇಂಜಿನಿಯರ್ ಇವರು ದಿ:31.5.95 ರಂದು ಸರ್ಕಾರಿ ಸೇವೆಯಿಂದ ನಿವೃತ್ತಿ ಹೊಂದಿದ್ದು, ತಡೆಹಿಡಿದಿರುವ ನಿವೃತ್ತಿ ಸೌಲಭ್ಯಗಳ ಮೇಲೆ ಬಡ್ಡಿ ಮಂಜೂರು ಮಾಡುವಂತೆ ಅರ್ಜಿ ಸಂ: 440 : 96ರಲ್ಲಿ ಕೆಎಟಿಗೆ ಅರ್ಜಿ ಸಲ್ಲಿಸಿರುತ್ತಾರೆ.

12) ಶ್ರೀ ಪಿ. ಶ್ರೀನಿವಾಸರಾವ್, ಸಹಾಯಕ ಕಾರ್ಯಪಾಲಕ ಇಂಜಿನಿಯರ್ ರವರು ದಿನಾಂಕ 29.2.96ರಂದು ವಯೋ ನಿವೃತ್ತಿ ಹೊಂದಿದ್ದು, ಇವರ ಮೇಲೆ ಇಲಾಖಾ ವಿಚಾರಣೆ ಬಾಕಿ ಇದ್ದುದರಿಂದ ಇವರ ನಿವೃತ್ತಿ ವೇತನವನ್ನು ತಡೆ ಹಿಡಿಯಲಾಗಿದ್ದು, ಇತ್ತೀಚೆಗೆ ಇಲಾಖಾ ವಿಚಾರಣೆ ಮುಕ್ತಾಯಗೊಂಡಿದ್ದು, ನಿವೃತ್ತಿ ವೇತನವನ್ನು ತಡವಾಗಿ ಬಿಡುಗಡೆ ಮಾಡಿರುವ ಬಗ್ಗೆ ಬಡ್ಡಿಯನ್ನು ಮಂಜೂರು ಮಾಡುವಂತೆ ಕೋರಿರುತ್ತಾರೆ. ಸದರಿ ಪ್ರಸ್ತಾವನೆಯು ಪರಿಶೀಲನೆಯಲ್ಲಿದೆ.

ನ್ಯಾಯ ಮಂಡಳಿಯಲ್ಲಿರುವ ಪ್ರಕರಣಗಳ ಬಗ್ಗೆ ನ್ಯಾಯ ಮಂಡಳಿಯು ನೀಡುವ ಆದೇಶದಂತೆ ಮುಂದಿನ ಕ್ರಮ ಕೈಗೊಳ್ಳಲಾಗುವುದು.

ಕಾರ್ಮಿಕ ನ್ಯಾಯಾಲಯದಲ್ಲಿ ಖಾಲಿ ಇರುವ ನ್ಯಾಯಾಧೀಶರ ನೇಮಕ

2039 - ಶ್ರೀ ಯು.ಆರ್. ಸಭಾಪತಿ (ಉಡುಪಿ) : ಮಾನ್ಯ ಕಾರ್ಮಿಕ ರಾಜ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದ ಕಾರ್ಮಿಕ ನ್ಯಾಯಾಲಯಗಳಲ್ಲಿ ಖಾಲಿ ಇರುವ ನ್ಯಾಯಾಧೀಶರ ಹುದ್ದೆಗಳ ಸಂಖ್ಯೆ ಎಷ್ಟು? (ಜಿಲ್ಲಾವಾರು ಮಾಹಿತಿ ನೀಡುವುದು)

ಆ) ಹಾಗಿದ್ದಲ್ಲಿ, ನ್ಯಾಯಾಧೀಶರ ಹುದ್ದೆ ಖಾಲಿ ಇದ್ದರೂ ನೇಮಕ ಮಾಡದಿರುವ ಕಾರಣಗಳೇನು? ಯಾವಾಗ ನೇಮಕ ಮಾಡಲಾಗುವುದು? (ವಿವರ ನೀಡುವುದು)

ಶ್ರೀ ಬಿ. ಸತ್ಯನಾರಾಯಣ (ಕಾರ್ಮಿಕ ರಾಜ್ಯ ಮಂತ್ರಿಯವರು) :

ಅ) 3 ನ್ಯಾಯಾಲಯಗಳಲ್ಲಿ ಅಧ್ಯಕ್ಷಾಧಿಕಾರಿಗಳ ಹುದ್ದೆ ಖಾಲಿ ಇರುತ್ತದೆ.

1. 3ನೇ ಅಪರ ಕಾರ್ಮಿಕ ನ್ಯಾಯಾಲಯ ಬೆಂಗಳೂರು ದಿ :7-8-96 ರಿಂದ ಖಾಲಿ ಇದೆ.
2. ಅಪರ ಔದ್ಯಮಿಕ ನ್ಯಾಯಾಧೀಕರಣ ಬೆಂಗಳೂರು ದಿ : 15-5-97ರಿಂದ
3. ಕಾರ್ಮಿಕ ನ್ಯಾಯಾಲಯಗಳ, ಮಡಿಕೇರಿ ದಿ : 15-5-97ರಿಂದ

ಆ) ಸದರಿ ನ್ಯಾಯಾಲಯಗಳಲ್ಲಿ ಖಾಲಿ ಇರುವ ಅಧ್ಯಕ್ಷಾಧಿಕಾರಿಗಳ ಹುದ್ದೆಯನ್ನು ಭರ್ತಿ ಮಾಡಲು ರಾಜ್ಯ ಉಚ್ಚ ನ್ಯಾಯಾಲಯದ ರಿಜಸ್ಟ್ರಾರ್ ಅವರನ್ನು, ನ್ಯಾಯಾಂಗ ಇಲಾಖೆಯ ಅಧಿಕಾರಿಗಳ ಸೇವೆಯನ್ನು ಸರ್ಕಾರದ ವಶಕ್ಕೆ ಕೋರಿದ್ದು ಅವರುಗಳ ಸೇವೆಗಳು ಈವರೆಗೆ ದೊರಕಿಲ್ಲ, ದೊರಕಿದ ಕೂಡಲೆ ಮೇಲೆ ಹೇಳಿದ ಖಾಲಿ ಹುದ್ದೆಗಳನ್ನು ಭರ್ತಿ ಮಾಡಲಾಗುವುದು.